
ಗೊತ್ತಿರಲಿಲ್ಲ ಎಂದು ಎಷ್ಟು ನಿದ್ದೆ ಮಾತ್ರೆ ತಿಂದರೂ ನಿದ್ದೆ ಬಾರದೆ ಹೊರಳಾಡಿ ನರಳಾಡಿ ಭೀತಿಯಲ್ಲೊ ಸಾವಿನ ಹೆದರಿಕೆಯಲ್ಲೊ ಆರೋಗ್ಯದ ಏರು ಪೇರಿನಲ್ಲಿ ನಟ್ಟಿರುಳಲ್ಲಿ ಕನಸಿನಲ್ಲಿ... ಮಾರ್ಕ್ಸ್ ಹೀಗೆ ಹೇಳಿದ್ದರು... ಕ್ರಾಂತಿಯ ಅಲೆಗಳನ್ನು ಯಾರೂ ತಡೆಯಲಾಗದೂ... ಏಗೆಲ್ಸ್... ಲೋಹಿಯಾ ಅಂಬೇಡ್ಕರ್... ಪೆರಿಯಾರ್... ಬುದ್ಧ... ಬಸವಣ್ಣ ಹೀಗೀಗೆ ಹೀಗೆಲ್ಲ ಹೇಳಿದ್ದರು ಎಂದು ಕನಸಿನಲ್ಲೇ ಎದ್ದು ಆ ನಗರದ ಗಾಂಧಿ ಸರ್ಕಲ್ಲಿನ ತನಕ ನಿದ್ದೆಯಲ್ಲೇ ನಡೆದು ಹೋಗಿ ಮಹಾಕ್ರಾಂತಿಯ ಭಾಷಣ ಮಾಡಿ ಎಷ್ಟೋ ರಾತ್ರಿ ಅಲ್ಲೇ ಗಾಂಧಿ ಪ್ರತಿಮೆಯ ಮುಂದೆ ಮಲಗಿ ಬೆಳಿಗ್ಗೆ ಬೇಗನೇ ಎದ್ದು... ಜಾಗಿಂಗ್‌ಗೆ ಬಂದಿದ್ದೇನೆ ಎಂಬಂತೆ ಎಚ್ಚರಗೊಂಡು ಮನೆಗೆ ತಲುಪಿ ಅಸಂಗತವಾಗಿದ್ದರು. ಸಾರ್ವಜನಿಕ ಭಾಷಣಗಳಲ್ಲಿ ಗುಂಡು ಹೊಡೆದಂತೆ ಬಂಡಾಯ ಹೂಡಿದ್ದರು. ಗುರುಗಳು ಮಿತಿ ಮೀರದಿರಲಿ ಎಂದು ಸಿಕ್ಕಾಗ ಹೇಳುತ್ತಿದ್ದೆ. 'ಹೇ ಬಿಡ್ರೀ... ಇನ್ನೆಷ್ಟು ಕಾಲ ಸುಳ್ಳಿನ ಜೊತೆ ಬದುಕಿ ರಾಜಿಮಾಡಿಕೊಳ್ಳೋದರೀ... ನಾಳೆನೇ ನನ್ನಹಣೆಗೆ ಗುಂಡು ಹೊಡೆಯಲಿ ಹೋಗ್ರಿ' ಎಂದು ದೇಶದ ಆವಾಂತರಗಳಿಗೆ ತಲೆ ಚಚ್ಚಿಕೊಳ್ಳಲು ಮುಂದಾಗಿದ್ದರು. ಪುಟ್ಟದೊಂದು ಪ್ರತಿರೋಧದ ಹಣತೆ ಅವರಿಂದ ಉರಿಯುತ್ತಿತ್ತು. ಬಲಾಢ್ಯ ಪ್ರಭುತ್ವ ಮೈಸೂರಲ್ಲಿ ಆನೆ ಅಂಬಾರಿಯ ದಸರೆಯ ಸಡಗರದಲ್ಲಿ ಸಾಗುತ್ತಿತ್ತು. ಒಂದು ನಿರ್ದಿಷ್ಟ ದೂರದಿಂದ ಹೇಗೆ ಗುಂಡು ಹೊಡೆದು ತಲೆ ಉರುಳಿಸಬಹುದು ಎಂದು ಯಾವುದೋ ಸಂಘಟನೆಯ ಜೊತೆ ಸೇರಿ ತರಬೇತಿ ಪಡೆಯುತ್ತಿದ್ದನು ಅವನು ಯಾವನೊ ಒಬ್ಬ ಸಂಚು ನಡೆಸಿದ್ದ. ಅವನ ಕೈಯಲ್ಲಿ ಯಾವತ್ತೂ ಕ್ರಾಂತಿ ಕಾರಿಗಳ ಒಂದು ಪಟ್ಟಿ ಇತ್ತು. ಅಂತವರೆಲ್ಲ ಹಿಂದೂ ಸನಾತನ ಧರ್ಮದ ರಾಕ್ಷಸರು ಎಂದು ಆತ ಯಾರಿಂದಲೊ ಬ್ರಾಂತಿಗೆ ಒಳಗಾಗಿ ದುಷ್ಟ ಸಂಹಾರವೇ ಶ್ರೇಷ್ಠ ದೇವಕಾರ್ಯ ಎಂದು ಹತ್ಯೆಗೈಯ್ಯಲು ಮುಂದಾಗಿದ್ದ.



ಈಗ ಕಾಲ ಎಲ್ಲೆಲ್ಲಿಗೊ ಹೋಗಿದೆ. ಅವತ್ತು ಈ ಬೃಹತ್ ದೇಶದಲ್ಲಿ ಏನಾಯಿತು ಎಂದು ಬಿತ್ತರಿಸಲು ಸೌಜನ್ಯದ ಒಂದು ರೇಡಿಯೋ ವಾಣಿ ಇತ್ತು. ತುರ್ತುಪರಿಸ್ಥಿತಿಯ ಕಾಲ ಬಂದಾಗ ಇಡೀ ದೇಶದ ಮಾಧ್ಯಮ ಇಂದಿರಾವಾಣಿಯಾಗಿತ್ತು. ಈಗ ಸರದಿ ಬೇರೆಯಾಗಿದೆ. ಬೇರೆ ಬೇರೆ ಮಾತೆಲ್ಲ ಭಾರತೀಯ ಮಾತೇ ತಾನೆ! ನಿಜವೇ... ಇತರರ ಮೌನ ಭಾರತದ ಸಂಕಟಕ್ಕೆ ಕಿವಿಗಳಿಲ್ಲವೇ... ಕಣ್ಣೂ ಇಲ್ಲವೇ ಎಂದು ಬಂಡಾಯ ಪ್ರಾಧ್ಯಾಪಕರು ನಿಯಂತ್ರಣ ಮೀರಿ ಇವತ್ತಿನ ಸರ್ಕಾರಗಳು ರೈತರ, ಕೂಲಿ ಕಾರ್ಮಿಕರ... ಸೇವಾ ವಲಯದ ಅನಾಥ ಹೆಣ್ಣು ಮಕ್ಕಳ ದುಡಿಮೆಗೆ ಯಾವ ಬೆಲೆ ನೀಡಿದೇ ಎಂದು ಅಬ್ಬರಿಸಿ ಅದೇ ಗಾಂಧಿ ಚೌಕದಲ್ಲಿ ಕೆಲವೇ ಕೆಲವು ಪ್ರತಿಭಟನಕಾರರ ಮುಂದೆ ವೀರಾವೇಶದ ಭಾಷಣ ಮಾಡುತ್ತಿದ್ದರು. ಆ ನವ ತರುಣ ಗನ್ ಅನ್ನು ಜೇಬಲ್ಲಿ ಇಟ್ಟುಕೊಂಡು ಸಂಚಿನ ವ್ಯವಸ್ಥೆಯಂತೆ ನನ್ನ ಗುರುಗಳ ತಲೆಗೆ ಗುಂಡು ಹೊಡೆಯಲು ಮರೆಯಲ್ಲಿ ಯತ್ನಿಸುತ್ತಿದ್ದ. ಅಂತಹ ಜನ ಜಂಗುಳಿಯ ಬೀದಿಯಲ್ಲಿ ಗುರಿಯಿಡುವುದು ಸುಲಭ ಇರಲಿಲ್ಲ. ಆ ಶೂಟರ್ ಹತ್ತಾರು ಬಾರಿ ಯತ್ನಿಸಿ ಮುಗಿಸಲಾಗದೆ ಹಿಂಜರಿದಿದ್ದ. ಅಂತೂ ಅವನು ತಲೆಗೆ ಶೂಟ್ ಮಾಡಿದ್ದ. ಕ್ಷಣ ಮಾತ್ರದಲ್ಲಿ ಬಂಡಾಯದ ಪ್ರೊಫೆಸರ್ ಸಾವಿನಿಂದ ಪಾರಾಗಿದ್ದರು. ಮರುದಿನ ಅಪೂರ್ವ ಬಂಡಾಯ ದೇಶಾದ್ಯಾಂತ ಮೊಳಗಿತ್ತು.

ಹತ್ಯೆ ಯತ್ನ ಖಂಡಿಸಿ ಬೃಹತ್ ಪ್ರತಿಭಟನೆಯಲ್ಲಿ ನಾನು ಮುಖ್ಯ ಭಾಷಣ ಮಾಡುವ ಸಕಾಲ ಬಂದಿತ್ತು. ನಾನು ಒಂದು ಬಗೆಯಲ್ಲಿ ನ್ಯಾಯ ದೀಕ್ಷೆಯನ್ನು ಜೀವನ್ಮರಣದ ಸವಾಲಿನಲ್ಲಿ ಸ್ವೀಕರಿಸಿ ಎದೆಯನ್ನು ತೆರೆದುಕೊಂಡಿದ್ದೆ. ಸದ್ಯ ಯಾವ ಗುಂಡುಗಳೂ ಬಡಿದಿಲ್ಲ. ●